# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 07-05-2022 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು**

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶಾಹೀನಾ, ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
5. ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)
6. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ್ ಅಸೋಸಿಯೇಷನ್(ರಿ)
7. ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ)
8. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
2. ಶ್ರೀ ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು,
3. ಕುಮಾರಿ ರಜನಿ, ಇಂಜಿನಿಯರ್, ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
4. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
5. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
6. ಶ್ರೀ ಪುಟ್ಟಸ್ವಾಮಿ, ಬೆಸ್ಕಾಂ ಇಲಾಖೆ,
7. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,
8. ಶ್ರೀ ವೆಂಕಟೇಶ್, ತೋಟಗಾರಿಕೆ ಇಲಾಖೆ,
9. ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

1) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)** ರವರು ಮಾತನಾಡಿ, ರಾಮಯ್ಯ ಬಡಾವಣೆ ಹಾಗೂ ಬಿಡಿಎ ಬಡಾವಣೆಗಳಲ್ಲಿ ಅಲ್ಲಲ್ಲಿ ಚರಂಡಿಗಳ ಮೇಲೆ ಕವರಿಂಗ್ ಸ್ಲಾಬ್ಸ್‌ಗಳು ಮುರಿದು ಹೋಗಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ವಾರ್ಡ್ ಪ್ರದೇಶದಲ್ಲಿ ತಪಾಸಣೆ ಕೈಗೊಂಡು ಅವಶ್ಯವಿರುವ ಕಡೆ ಕವರಿಂಗ್ ಸ್ಲಾಬ್‌ಗಳನ್ನು ಅಳವಡಿಸಿಕೊಡಲಾಗುವುದು ಎಂದು ಕಳೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಅವಶ್ಯವಿರುವ ಕಡೆ ಸ್ಥಳಗಳನ್ನು ಗುರುತಿಸಲಾಗಿದ್ದು, ಕವರಿಂಗ್ ಸ್ಲಾಬ್‌ಗಳನ್ನು ಅಳವಡಿಸಲಾಗುವುದೆಂದು ಸಭೆಗೆ ತಿಳಿಸಿದರು.

2) **ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ್ ಅಸೋಸಿಯೇಷನ್(ರಿ)** ರವರು ಮಾತನಾಡಿ, ಕಮ್ಮನಹಳ್ಳಿ ಮುಖ್ಯರಸ್ತೆ, ಪಾದಾಚಾರಿ ಮಾರ್ಗದಲ್ಲಿ ಒತ್ತುವರಿ ಮಾಡಿ ವ್ಯಾಪಾರ ವಹಿವಾಟು ಮಾಡುತ್ತಿರುವವರನ್ನು ತೆರವುಗೊಳಿಸಲು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರುಗಳು ಈಗಾಗಲೇ ಕಮ್ಮನಹಳ್ಳಿ ಮುಖ್ಯರಸ್ತೆ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಸಣ್ಣ ಪುಟ್ಟ ವ್ಯಾಪಾರಸ್ಥರು ಪುನರಾವರ್ತಿತಗೊಳ್ಳುತ್ತಿದ್ದು, ಮತ್ತೊಮ್ಮೆ ಒತ್ತುವರಿಯನ್ನು ತೆರವುಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

3) **ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)** ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿರುವ ಉದ್ಯಾನವನಗಳ ಸ್ವಚ್ಛತೆ ಕ್ರಮ ಬದ್ಧವಾಗಿ ನಡೆಯುತ್ತಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ತೋಟಗಾರಿಕಾ ಇಲಾಖೆ ನಿರೀಕ್ಷಕರು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಈ ಮಾಹೆಯ ಕೊನೆಯಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡಲಾಗುತ್ತಿದ್ದು, ತದನಂತರ ನಿರಂತರವಾಗಿ ಉದ್ಯಾನವನಗಳ ಸ್ವಚ್ಛತೆಯನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

4) **ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ)** ರವರು ಮಾತನಾಡಿ, ವಿದ್ಯುತ್ ಸರಬರಾಜು ಪದೇ ಪದೇ ನಿಲುಗಡೆಯಾಗುತ್ತಿದ್ದು, ಇದರಿಂದ ಆನ್‌ಲೈನ್ ತರಗತಿಗಳಿಗೆ ತೊಂದರೆಯಾಗುತ್ತಿರುತ್ತದೆ ಎಂದು ಸಭೆಗೆ **ತಿಳಿಸಿದಾಗ,** ಸಭೆಯಲ್ಲಿ ಹಾಜರಿದ್ದ, ಬೆಸ್ಕಾ ಅಭಿಯಂತರರು, ಇತ್ತೀಚಿನ ದಿನಗಳಲ್ಲಿ ವಿದ್ಯುತ್ ತಂತಿಗಳ ದುರಸ್ಥಿ ಹಾಗೂ ಮಳೆ ಬಂದಾಗ ಹೆಚ್ಚು ಗಾಳಿ ಬೀಸುವುದರಿಂದ ತಾತ್ಕಾಲಿಕವಾಗಿ ವಿದ್ಯುತ್ ನಿಲುಗಡೆ ಮಾಡಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

5) **ಶಾಹೀನಾ, ವೈದ್ಯಾಧಿಕಾರಿಗಳು ಮಾತನಾಡಿ,** ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ 05 ಪಾಸಿಟಿವ್ ಪ್ರಕರಣ ದೃಢಪಟ್ಟಿದ್ದು, ಇದರಲ್ಲಿ 03 ಹೋಮ್ ಕ್ವಾರಂಟೈನ್ ಮತ್ತು 02 ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಎಂದು ಸಭೆಗೆ ತಿಳಿಸಿ, ಪ್ರಸ್ತುತ 12 ರಿಂದ 18 ವಯೋಮಾನದವರಿಗೆ ಶಾಲೆ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ಹಾಕಲಾಗುತ್ತಿದ್ದು ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

Prasanna Kumar A

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.